Sri G. DUGAPPA.—Have you granted Industrial Loans in Chitaldrug District similar to the one that has been granted now ?

Sri H. SIDDAVEERAPPA.—That does not arise out of this question, Sir.

Rural credit through Reserve Bank.

Q.—196. Sri G. SIVAPPA (Holalkere).—

Will the Government be pleased to state :—

(*a*) whether they are going to borrow money from Reserve Bank to extend credit facilities in rural areas ;

(*b*) if so, the agency through which they are going to extend credit facilities in rural areas ?

A.—Sri H. SIDDAVEERAPPA (Minister for Home and Industries).—

(*a*) The Government will not borrow. On Government guarantee it is proposed to take a loan from Reserve Bank.

(*b*) The matter is under consideration.

ಶ್ರೀ ಜಿ. ಶಿವಪ್ಪ.—ಇಲ್ಲಿ ಉತ್ತರದಲ್ಲಿ ತಾವು ಸಲಹೆ ಕೊಟ್ಟಿರುವುದಾಗಿ ಹೇಳಿದ್ದೀರಿ. ಯಾವಾಗ ಮಾಡಿದ್ದು ? ತಾರೀಖನ್ನು ಹೇಳುತ್ತೀರಾ ?

Sri H. SIDDAVEERAPPA.—The subject is now under discussion for the last one year and very recently the Joint Registrar of Co-operative Societies and the President of the Apex Bank were in Bombay and they have given an interim report on 10th March 1953.

ಶ್ರೀ ಜಿ. ಶಿವಪ್ಪ.—ಇದಕ್ಕೆ ಒಂದು ವರ್ಷ ಬೇಕೇ ?

ಶ್ರೀ ಎಚ್. ಸಿದ್ದವೀರಪ್ಪ.—ನಿಜವಾಗಿಯೂ ಅಷ್ಟು ಬೇಕಾಗುತ್ತದೆ.

ಶ್ರೀ ಜಿ. ಶಿವಪ್ಪ.—ತಾವು ಏರ್ಪಾಡು ಮಾಡುತ್ತಿರುವುದು short term ಸಾಲಗಳನ್ನು ಕೊಡಲಿಕ್ಕೋ ಅಥವಾ long term ಸಾಲಗಳನ್ನು ಕೊಡಲಿಕ್ಕೋ ?

Sri H. SIDDAVEERAPPA.—Everything is in a formative stage at present. the Reserve Bank of India wants one year to give short term credit. They have envisaged a scheme even for a long term loan and it is also under contemplation.

Sri T. C. BASAPPA.—May I know the rate of interest, Sir ?

Sri H. SIDDAVEERAPPA.—The rate of interest and all those matters are yet to be finalised.

Loan by the Reserve Bank of India to Agriculturists.

Q.—248. Sri G. A. THIMMAPPA GOWDA (Arkalgud).—

Will the Government be pleased to state :—

(*a*) whether the Reserve Bank of India have agreed to advance one crore of rupees to advance short term credits to the agriculturists in Mysore State ;

(*b*) the machinery through which they propose to advance money to the agriculturists ;

(*c*) when they will take steps to advance money to the agriculturists ?

A.—Sri H. SIDDAVEERAPPA (Minister for Home and Industries).—

(*a*) The matter is under correspondence

(*b*) Through the Apex Bank and its primaries.

(*c*) As soon as the loan is obtained.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಪತ್ರವ್ಯವಹಾರ ನಡೆಯುತ್ತಿದೆಯೆಂದು ಹೇಳಿದ್ದೀರಿ ; ಒಂದು ಕೋಟಿ ರೂಪಾಯಿಗಳು ರಿಸರ್ವ್ ಬಾಂಕಿನಿಂದ ಬರಬೇಕಾದರೆ ಎಷ್ಟು ದಿವಸವಾಗುತ್ತದೆ ?

Sri H. SIDDAVEERAPPA.—I hope to finalise the whole scheme within a month or two. Our officers have yet to go to Madras according to the instructions of the Reserve Bank of India. Our officers had already gone to Bombay and now they have to go to Madras. Afterwards the whole scheme will be finalised.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಅಪೆಕ್ಸ್ ಬ್ಯಾಂಕು ಮತ್ತು ಇತರ ಪ್ರೈಮರಿಗಳಿಗೆ ಈ ಹಣವನ್ನು ಹಂಚುತ್ತೇವೆಂದು ಹೇಳಿದ್ದೀರಿ. ಪ್ರೈಮರಿಗಳೆಂದರೆ ಯಾವುವು ?

ಶ್ರೀ ಎಚ್. ಸಿದ್ದವೀರಪ್ಪ.—ಅಪೆಕ್ಸ್ ಬ್ಯಾಂಕೇ ಎಲ್ಲ ಡಿಸ್ಟ್ರಿಕ್ಟುಗಳಲ್ಲೂ ತನ್ನ ಬ್ರಾಂಚುಗಳನ್ನು

ತೆರೆಯಬೇಕು. ಇಲ್ಲವೇ ಸಹಕಾರ ಸಂಘಗಳ ಮೂಲಕ ಹಣವನ್ನು ಕೊಡುವುದನ್ನು ಅಳವಡಿಸುವುದಕ್ಕೆ ಸಾಧ್ಯವೇ ಎಂಬುದನ್ನು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಅಪೆಕ್ಸ್‌ಬ್ಯಾಂಕಿನಲ್ಲಿ ರಿಸರ್ವ್ ಎಷ್ಟಿದೆ ?

ಶ್ರೀ ಎಚ್. ಸಿದ್ದವೀರಪ್ಪ.—ನೋಟೀಸ್.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಅಪೆಕ್ಸ್‌ಬ್ಯಾಂಕಿನ ಮೇರೆ ಸರ್ಕಾರದವರ hold ಏನಾದರೂ ಇದೆಯೇ ?

Sri H. SIDDAVEERAPPA.—Government are contemplating to revise the whole Act in order to suit the present circumstances in view of the heavy responsibility the Bank has to bear and we have very recently taken the question. Probably the Hon'ble member is aware that the Government has got 5 lakhs worth of shares in the Apex Bank.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಅಪೆಕ್ಸ್‌ಬ್ಯಾಂಕಿಗೆ ಆಗದೆ ಹೋದರೆ ಮಲ್ಟಿಪರ್ಪಸ್ ಸೊಸೈಟಿಗಳ ಮುಖಾಂತರವಾದರೂ ಹಂಚುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ಪರಿಶೀಲನೆ ಮಾಡುತ್ತೇವೆ. ಪ್ರೈಮರೀಸ್ ಯಾವ ಯಾವುವನ್ನು ಮಾಡಬೇಕು, ಯಾವ ಯಾವುವನ್ನು ಮೇಯಿನ್ ಆಗಿ ಇಟ್ಟುಕೊಳ್ಳಬೇಕು ಎಂಬುದನ್ನು ಯೋಚನೆ ಮಾಡುತ್ತೇವೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಸರ್ಕಾರದವರೇ ಹಣವನ್ನಿಟ್ಟುಕೊಂಡು short term ಸಾಲಗಳನ್ನು ಸೊಸೈಟಿಗಳಿಲ್ಲದಿರುವ ಕಡೆ ಮತ್ತು ಸೊಸೈಟಿಗಳಿದ್ದೂ ಮೆಂಬರುಗಳಾಗಿಲ್ಲದಿರುವ ರೈತರುಗಳಿಗೆ ನೇರವಾಗಿ ಸಾಲ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

Sri H. SIDDAVEERAPPA.—That is not found possible according to the arrangements with the Reserve Bank of India. Elsewhere they have made use of co-operative institutions for distributing the loans, of course, Government having given the guarantee. Therefore it is not found possible for the Government to directly operate. We have to make use of one central co-operative organisation. That is the scheme.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈಗ ಸರ್ಕಾರದವರು ರೈತರುಗಳಿಗೆ ತಕಾವಿ ಸಾಲಗಳನ್ನು ನೇರವಾಗಿ ಕೊಡುತ್ತಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು. ಅದನ್ನು ನಮ್ಮ ಜನರಲ್ ರೆವೆನ್ಯೂನಿಂದ ಕೊಡುತ್ತಿದ್ದೇವೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಹಾಗೆಯೇ ರೈತರುಗಳಿಲ್ಲರಿಗೂ ಸಾಲ ದೊರೆಯಬೇಕಾದರೆ, ಈರೀತಿ ಇನ್ನೂ ಹೆಚ್ಚು ಹಣ ಒದಗಿಸಿಕೊಂಡು ನೇರವಾಗಿ ರೈತರಿಗೆ ಸಾಲ ಕೊಡುವುದಕ್ಕೆ ಶೀಘ್ರವಾಗಿ ಏರ್ಪಾಡು ಮಾಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಅದೇ ಉದ್ದೇಶದಿಂದಲೇ ಈಗ ರಿಸರ್ವ್ ಬ್ಯಾಂಕಿನವರನ್ನು ಸಾಲ ಕೇಳುತ್ತಿರುವುದು. ಆದರೆ, ತಾವು ಹೇಳುವ ಪ್ರಕಾರ ಸರ್ಕಾರವೇ ನೇರವಾಗಿ ಈ ಹೊರೆಯನ್ನು ಹೊರುವುದಕ್ಕೆ ಈ ಸ್ಕೀಮಿನಲ್ಲೇ ಸಾಧ್ಯವಿಲ್ಲ, ರೂಲ್ಸ್‌ನಲ್ಲಿ ಅವಕಾಶವಿಲ್ಲ.

That is not possible. It will have to be operated only through co-operative institution.

ಶ್ರೀ ಬಿ. ಎಕ್. ಬೋರಣ್ಣಗೌಡ.—ಅಪೆಕ್ಸ್‌ಬ್ಯಾಂಕಿನಿಂದ ಸಾಲ ಕೇಳುವವರು ಸಾಲ ತೆಗೆದುಕೊಳ್ಳಬೇಕಾದರೆ ಅವರ ಅರ್ಜಿ ಡೈರೆಕ್ಟರ ಮೂಲಕವೇ ಬರಬೇಕಾಗಿದೆಯೆಂಬುದು ತಮ್ಮ ಅವಗಾಹನೆಗೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ನನ್ನ ಅವಗಾಹನೆಗೆ ಬಂದಿಲ್ಲ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಈಗ ರಿಸರ್ವ್ ಬ್ಯಾಂಕಿನವರು ಕೊಡುವ ಹಣವನ್ನು, ಹಿಂದೆ ರಿಸರ್ವ್ ಬ್ಯಾಂಕಿನವರು ಸಾಲದ ಸರ್ವೇಮಾಡಿ ಎಲ್ಲೆಲ್ಲಿ ಸಾಲದ ಹೊರೆ ಜಾಸ್ತಿಯಾಗಿದೆಯೆಂದು ಕಂಡಿದ್ದಾರೋ ಅಲ್ಲಿಗೇ ಕೊಡಬೇಕೆಂದು ಮಾಡಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ರಿಸರ್ವ್ ಬ್ಯಾಂಕಿನವರು ಅಲ್ಲಿ ಇಲ್ಲಿ sample ಸರ್ವೇ ಮಾತ್ರ ಮಾಡಿದರು. ಎಲ್ಲ ಕಡೆಯಲ್ಲೂ ಸರ್ವೆ ಮಾಡಲಲ್ಲ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಹಾಗೆ ಸರ್ವೆ ಮಾಡಿರುವ ಕಡೆ ಯಾವ ಏಜೆನ್ಸಿ ಮೂಲಕ ಈ ಹಣವನ್ನು ಹಂಚಿಕೆ ಮಾಡಬೇಕೆಂದು ತೀರ್ಮಾನ ಮಾಡಿದ್ದಾರೆ ?

ಶ್ರೀ ಎಚ್. ಸಿದ್ದವೀರಪ್ಪ.—ಅದಕ್ಕೆ ಅವರು ಕೋ-ಆಪರೇಟಿವ್ ಸಂಸ್ಥೆಗಳ ಮೂಲಕ ಮಾಡಬೇಕೆಂದು ತೀರ್ಮಾನಮಾಡಿದ್ದಾರೆ. ನಾವುಗಳು ಒಂದು alternative ಯೋಜನೆಯನ್ನು ಬೇರೆ ಇಟ್ಟಿದ್ದೇವೆ. ಏನೆಂದರೆ, ಅಗ್ರಿಕಲ್ಚರಲ್ ಫೈನಾನ್ಸ್ ಕಾರ್ಪೊರೇಷನ್ನನ್ನು ಮಾಡಿ ಅವರ ಮುಖಾಂತರ ಮಾಡೋಣ ಎಂದು ಹೇಳಿದ್ದೇವೆ. ಅವರು, ಅದು ಸರಿಯಾಗುವುದಿಲ್ಲ, ಬಾಕಿ ಪ್ರಾಂತಗಳಲ್ಲಿ ಕೋ-ಆಪರೇಟಿವ್ ಸಂಸ್ಥೆಗಳ ಮೂಲಕವೇ ಮಾಡುತ್ತಿದ್ದಾರೆ, ಬೊಂಬಾಯಿ, ಮದ್ರಾಸುಗಳ ಕಡೆ ಆ ಏರ್ಪಾಡು ಚೆನ್ನಾಗಿ ನಡೆಯುತ್ತಿದೆ, ನಿಮ್ಮಲ್ಲಿಯೂ ಕೋ-ಆಪರೇಟಿವ್ ಸಂಸ್ಥೆಗಳಿವೆ, ಅವುಗಳನ್ನೇ ದೃಢಪಡಿಸಿ ತಕ್ಕ ರಕ್ಷಣೆಗಳನ್ನಿಟ್ಟುಕೊಂಡು ಏರ್ಪಾಡು ಮಾಡಿಕೊಳ್ಳಿ ಎಂದು ಹೇಳಿದ್ದಾರೆ. ರಿಸರ್ವ್ ಬ್ಯಾಂಕು ಸೆಂಟ್ರಲ್ ಬ್ಯಾಂಕಿನಂತಿರುತ್ತದೆಂದು ಹೇಳಿದ್ದಾರೆ. ಇದಕ್ಕೆ ಸರ್ಕಾರದವರು ಒಪ್ಪಿಕೊಂಡಿದ್ದಾರೆ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಅಪೆಕ್ಸ್‌ಬ್ಯಾಂಕ್‌ನಲ್ಲಿ interested ಆಗಿರುವ ಜನಗಳು ಇಂಥ ಸೊಸೈಟಿಗಳಿಗೇ ಮಾತ್ರ ಕೊಡಬೇಕು, ಇಂಥ ರೀತಿಯಲ್ಲೇ ಮಾಡಬೇಕೆಂದು ಬಲವಂತ ಮಾಡುತ್ತಿದ್ದಾರೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಅದೇ ಕಾರಣದಿಂದ ಅಪೆಕ್ಸ್‌ಬ್ಯಾಂಕನ್ನು ಯಾವರೀತಿ ರಿ-ಆರ್ಗನೈಸ್ ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಆವಶ್ಯಕತೆ ಬಿದ್ದರೆ ಒಂದು ಕಾನೂನನ್ನು ಕೂಡ ರಚಿಸಬೇಕೆಂದು ಮಾಡಿದ್ದೇವೆ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಹಾಗಾದರೆ ಸರಿಯಾದ ಬಂದೋಬಸ್ತು ಇಟ್ಟುಕೊಂಡು ಎಲ್ಲವನ್ನೂ ಯೋಚನೆಮಾಡಿ ಮಾಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು. ಇದನ್ನೆಲ್ಲ ಯೋಚನೆ ಮಾಡಿಯೇ ಕೊಡುತ್ತೇವೆ.

ಶ್ರೀ ಡಿ. ದೇವರಾಜ ಅರಸ್.—ಪ್ರೈಮರಿಗಳು ಎಂದರೆ ಯಾವುವು?

ಶ್ರೀ ಎಚ್. ಸಿದ್ದವೀರಪ್ಪ.—ಯಾವ ಯಾವವುಗಳನ್ನು ಪ್ರೈಮರಿಯಾಗಿ ಮಾಡಿಕೊಳ್ಳಬೇಕೆಂಬುದನ್ನು ಇನ್ನೂ ಯೋಚನೆಮಾಡಿಲ್ಲ.

ಶ್ರೀ ಡಿ. ದೇವರಾಜ್ ಅರಸ್.—ಹಾಗಾದರೆ ಮಲ್ಟಿ ಪರ್ಪಸ್ ಸೊಸೈಟಿಗಳ ಮೂಲಕ ಹಂಚುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ಆಲೋಚನೆ ಮಾಡುತ್ತೇವೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಅಲ್ಪಾವಧಿ ಮತ್ತು ದೀರ್ಘಾವಧಿ ಸಾಲಗಳಿಗೆ ಹಣ ಎಷ್ಟು ಬೇಕೆಂಬ ಬಗ್ಗೆ ವರದಿ ತರಿಸಿದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಸ್ವಲ್ಪ ಹೆಚ್ಚುಕಡಮೆ ನುಮಾರು ಒಂದು ಕೋಟಿ ರೂಪಾಯಿ ಬೇಕೆಂದು ತಿಳಿದು ಕೊಂಡಿದ್ದೇವೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ರಿಜರ್ವ್ ಬ್ಯಾಂಕಿನಿಂದ ಎಷ್ಟು ದೊರಕಬಹುದು?

ಶ್ರೀ ಎಚ್. ಸಿದ್ದವೀರಪ್ಪ.—ಒಂದು ಕೋಟಿ ರೂಪಾಯಿಗಳವರೆಗೆ ರಿಜರ್ವ್ ಬ್ಯಾಂಕಿನಿಂದ ಸಾಲ ಪಡೆಯುವುದಕ್ಕೆ ಅವಕಾಶವಿದೆ. ನಮ್ಮ ಅವಶ್ಯಕತೆ, ಎಷ್ಟು ಕೆಲಸ ಮಾಡುತ್ತೇವೆ, ಇವುಗಳನ್ನು ನೋಡಿಕೊಂಡು ನಮ್ಮ ಪ್ರಗತಿಗೆ ಅವರು ಸಹಾಯಮಾಡುವ ಭರವಸೆಯಿದೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ನಮ್ಮ ಅವಶ್ಯಕತೆ ಎಷ್ಟೆಂಬ ವಿಚಾರದಲ್ಲಿ ವರದಿ ಬಂದಿದೆಯೇ?

Mr. SPEAKER.—About a crore, he said.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಒಂದು ವರ್ಷದಿಂದ ಪತ್ರವ್ಯವಹಾರದಲ್ಲಿದೆ ಎಂದು ಹೇಳಿದಿರಿ, ಇದು ತೀರ್ಮಾನವಾಗಲು ಎಷ್ಟು ಕಾಲವಾಗುತ್ತದೆ?

ಶ್ರೀ ಎಚ್. ಸಿದ್ದವೀರಪ್ಪ.—ಗೊತ್ತಿಲ್ಲ, ಆದಷ್ಟು ಶೀಘ್ರದಲ್ಲೇ ಮಾಡಬೇಕೆಂದಿದ್ದೇವೆ.

ಶ್ರೀ ಬಿ. ರಾಚಯ್ಯ.—ಏಪೆಕ್ಸ್ ಬ್ಯಾಂಕಿನ ಅಧ್ಯಕ್ಷರು ನಿಯಮಿತರಾದವರಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಬಿ. ರಾಚಯ್ಯ.—ಹಳ್ಳಿಗಳಲ್ಲಿ ರೈತರ ಸ್ಥಿತಿಯನ್ನು ಯಾವರೀತಿಯಲ್ಲಿ ಉತ್ತಮಪಡಿಸಬೇಕೆಂದು ಯೋಚನೆ ಮಾಡಿದ್ದೀರಿ?

ಶ್ರೀ ಎಚ್. ಸಿದ್ದವೀರಪ್ಪ.—How to strengthen the Apex Bank organization to look to the present needs ಎಂಬುದನ್ನು ತೀವ್ರವಾಗಿ ಆಲೋಚನೆ ಮಾಡುತ್ತಿದ್ದೇವೆ.

ಶ್ರೀ ಎಸ್. ಗೋಪಾಲಗೌಡ.—'ಸ್ಯಾಂಪಲ್ ಸರ್ವೆ' ಯಾವರೀತಿ ಮಾಡಿದ್ದಾರೆ?

ಶ್ರೀ ಎಚ್. ಸಿದ್ದವೀರಪ್ಪ.—ರಿಜರ್ವ್ ಬ್ಯಾಂಕಿನವರು ಬಂದು ನೋಡಿ, ತೆಗದು ಕೊಂಡರು.

ಶ್ರೀ ಎಸ್. ಗೋಪಾಲಗೌಡ.—ಮಲೆನಾಡು ಅಡಿಕೆ ಬೆಳೆಗಾರರು ತಮಗೆ ಸಾಲವನ್ನು ದೊರಕಿಸಿಕೊಡಬೇಕೆಂದು ಮನವಿ ಮಾಡಿಕೊಂಡಿದ್ದಾರೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಎಸ್. ಗೋಪಾಲಗೌಡ.—ಇದೇ ರೀತಿ ಮಲೆನಾಡಿನ ರೈತರಿಗೂ ಅಲ್ಲೇ ನೇರವಾಗಿ ಬ್ಯಾಂಕಿನ ಶಾಖೆಯನ್ನು ತೆರೆದು ಸಾಲವನ್ನು ಪಡೆಯಲು ಸೌಲಭ್ಯವನ್ನು ಕಲ್ಪಿಸುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ತಮಗೇ ಗೊತ್ತಿರುವ ಹಾಗೆ ಮಲೆನಾಡು ಅಡಿಕೆ ಸಂಘಕ್ಕೆ ಏಪೆಕ್ಸ್ ಬ್ಯಾಂಕಿನಿಂದ ಹೇರಳವಾಗಿ ಸಾಲ ಕೊಟ್ಟಿದೆ.

ಶ್ರೀ ಕೆ. ವಿ. ಬೈರೇಗೌಡ.—ಸರ್ಕಾರದವರು ಸಾಲಗಳನ್ನು ಕೊಟ್ಟರೂ ಅದು ಮೂರು ವರ್ಷಗಳಿಗಿಂತ ಮುಂಚೆ ದೊರಕುತ್ತಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಎಷ್ಟು ಅವಶ್ಯಕತೆಯಿದೆಯೋ ಅಷ್ಟು ಹಣ ನಮ್ಮಲ್ಲಿರಲಿಲ್ಲ. ರಿಜರ್ವ್ ಬ್ಯಾಂಕಿನ ಸಹಾಯ ದೊರೆತರೆ ಕೊಂಚವಾದರೂ ಅನುಕೂಲ ಮಾಡಬಹುದೆಂಬ ಭರವಸೆಯಿದೆ.

Crimes in Devanahalli and Bangalore North Taluks.

Q.—351. **Sri K. V. BYRE GOWDA** (Bangalore North).—Will the Government be pleased to state :—

the number of cases of crimes registered and the number of cases launched and the number of cases committed from April 1952 to end of January 1953 in Devanahalli and Bangalore North Taluks?

A.—**Sri H. SIDDAVEERAPPA** (Minister for Home and Industries).—

	Devanahalli Taluk	Bangalore North Taluk
Number of cases registered from 1st April 1952, to 1st February 1953.	66	364
Number of cases launched.	38	154
Number of cases committed to Sessions.	Nil	Nil

ಶ್ರೀ ಕೆ. ವಿ. ಬೈರೇಗೌಡ.—ಇಂಥ ಕೇಸುಗಳಲ್ಲಿ ಕಮಿಟರ್ ಕೇಸುಗಳೆಷ್ಟು?

ಶ್ರೀ ಎಚ್. ಸಿದ್ದವೀರಪ್ಪ.—ಒಂದು ತಾಲ್ಲೂಕಿನಲ್ಲಿ ಇಲ್ಲ, ಇನ್ನೊಂದು ತಾಲ್ಲೂಕಿನಲ್ಲಿ ಎಂಟು.

ಶ್ರೀ ಕೆ. ವಿ. ಬೈರೇಗೌಡ.—ಇಷ್ಟೊಂದು ಕೇಸುಗಳಲ್ಲಿ ಒಂದೂ ಸೆಷನ್ಸ್ ಕೋರ್ಟಿಗೆ ಕಮಿಟ್ ಆಗದೇ ಯಿರುವುದಕ್ಕೆ ಪೋಲೀಸಿನವರ ದಕ್ಷತಾಹೀನತೆ ಕಾರಣವಲ್ಲವೇ!

ಶ್ರೀ ಎಚ್. ಸಿದ್ದವೀರಪ್ಪ.—ನಾವು ಕೇಸುಗಳನ್ನು ಕೋರ್ಟಿನ ಮುಂದೆ ಇಡುತ್ತೇವೆ; ತೀರ್ಮಾನ ಮಾಡುವುದು ಕೋರ್ಟು.